ಡಾ: ಎಂ. ಶಂಕರ ನಾಯ್ಕ (ವೈದ್ಯಕೀಯ ಶಿಕ್ಷಣ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಸ್ಟೇಟ್ ಹೈವೇ ಹಾಗೂ ನ್ಯಾಶನಲ್ ಹೈವೇಯಲ್ಲಿ 44 ಟ್ರಾಮ ಸೆಂಟರ್‌ಗಳನ್ನು 50 ಕಿ.ಮೀ. ಒಳಗಡೆ ತೆರೆಯಬೇಕೆಂದು ಸರ್ಕಾರದ ತೀರ್ಮಾನವಾಗಿದೆ. ಈಗ ಅವರು ಹೇಳತಕ್ಕಂಥದ್ದು ಕುಣಿಗಲ್. ಈಗ ನೆಲಮಂಗಲ್ ಮತ್ತು ಚನ್ನರಾಯಪಟ್ಟಣದ ಹತ್ತಿರ ಏನು ಇದೆ ಅದನ್ನು ಕೈಬಿಟ್ಟಿದ್ದಾರೆ. 50 ಕಿ.ಮೀ. ಒಳಗಡೆ ಎರಡು ಬರುವುದರಿಂದ ಅದನ್ನು ಕೈಬಿಟ್ಟಿದ್ದಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಆದ 70 ಕಿ.ಮೀ. ಆಗುತ್ತದೆ. ನೆಲಮಂಗಲ ಕೂಡ 50 ಕಿ.ಮೀ. ದೂರವಾಗುತ್ತದೆ. ಈ ಮಧ್ಯೆ ಅಪಘಾತವಾದ ಗಾಯಾಳುಗಳನ್ನು ಸಾಗಿಸಲು ಏನಾದರೂ ಮಾಡಿ ಈ ಆಸ್ಪತ್ರೆಗೆ ಒಂದು ಆಂಬುಲೆನ್ಸ್ ಒದಗಿಸುವ ವ್ಯವಸ್ಥೆ ಮಾಡುತ್ತೀರಾ? ಇದರ ಬಗ್ಗೆ ಪುನಃ ಪರಿಶೀಲನೆ ಮಾಡಿ, ಸರ್ಕಾರಕ್ಕೆ ಒಂದು ಆಂಬುಲೆನ್ಸ್ ಒದಗಿಸುವುದಕ್ಕೆ ಏನು ಬರ್ಡನ್ ಆಗುವುದಿಲ್ಲ.

ಡಾ : ಎಂ. ಶಂಕರ್ ನಾಯಕ್ :— ಅಧ್ಯಕ್ಷರೆ, ಪ್ರತಿ ಟ್ರಾಮ ಸೆಂಟರ್‌ನಲ್ಲಿ 10 ಬೆಡ್‌ನ ಆಸ್ಪತ್ರೆ, ಒಂದು ಆಂಬುಲೆನ್ಸ್ ಒಂದು ವೈರ್‌ಲೆಸ್ ಒಂದು ಇಸಿಜಿ ಹಾಗೂ ಒಂದು ಎಕ್ಸರೇ ಎಲ್ಲಾ ಇರುತ್ತವೆ. ಅಪಘಾತವಾದ ತಕ್ಷಣ ಮಾಹಿತಿ ಕೊಟ್ಟರೆ ಆ ಆಂಬುಲೆನ್ಸ್ ಹೋಗುತ್ತದೆ. ಚನ್ನರಾಯಪಟ್ಟಣಕ್ಕೆ ಆ ಸೌಲಭ್ಯ ಇರುತ್ತದೆ.

ಅಧ್ಯಕ್ಷರು :— ಅವರು ಆ ಕಡೆ ಚನ್ನರಾಯಪಟ್ಟಣ ಈ ಕಡೆ ನೆಲಮಂಗಲ ಎರಡಕ್ಕೂ ಹತ್ತಿರ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ನಮ್ಮ ಭಾಗದಲ್ಲಿ ಹೆಚ್ಚಿನ ಅಪಘಾತಗಳು ಆಗುತ್ತವೆ ಅಲ್ಲಿ ಟ್ರಾಮ ಸೆಂಟರ್ ಮಾಡದೇ ಹೋದರು ಪರವಾ ಇಲ್ಲ, ಅದಕ್ಕೆ ಬೇರೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ.

ಡಾ: ಎಂ. ಶಂಕರ್ ನಾಯಕ್ :— ಈಗಾಗಲೇ ಹೇಳಿರುವ ಪ್ರಕಾರ ಕುಣಿಗಲ್‌ಗೆ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗುತ್ತದೆ.

ಅಧ್ಯಕ್ಷರು :— ಆಂಬುಲೆನ್ಸ್ ಕೊಡುತ್ತೇವೆಂದು ಹೇಳಿದ್ದಾರೆ. ಮೊನ್ನೆ ನಾನೂ ಕೂಡ ಆ ಕ್ಷೇತ್ರಕ್ಕೆ ಹೋಗಿದ್ದೆ, ಹೆಬ್ಬೂರಿಗೆ ಒಂದು ಲೇಡಿ ಮೆಡಿಕಲ್ ಆಫೀಸರ್ ಪೋಸ್ಟ್ ಮಂಜೂರು ಮಾಡಬೇಕೆಂದು ಕೇಳಿದ್ದಾರೆ ಅದನ್ನು ನೀವು ಕೊಡಬೇಕಾಗುತ್ತದೆ.

ಡಾ: ಎಂ. ಶಂಕರ್ ನಾಯಕ್ :— ಇದರ ಬಗ್ಗೆ ಸಚಿವರ ಗಮನಕ್ಕೆ ತಂದು, ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

<u>ಮೈಸೂರಿನ ತಿಲಕನಗರದಲ್ಲಿ ಹೈಟೆಕ್ ಆಸ್ಪತ್ರೆ ನಿರ್ಮಾಣ.</u>

18(406) ಶ್ರೀ ಮಾರುತಿರಾವ್ ಪವಾರ್ (ನರಸಿಂಹ ರಾಜ್) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1 ಮೈಸೂರಿನ ತಿಲಕ್ ನಗರದಲ್ಲಿ ಆರೋಗ್ಯ ಇಲಾಖೆಗೆ ಸೇರಿದ 4 ಎಕರೆ ಜಮೀನಿನಲ್ಲಿ ಹೈಟೆಕ್ ಆಸ್ಪತ್ರೆ ನಿರ್ಮಿಸುವುದಾಗಿ ಕಳೆದ ಅಧಿವೇಶನದಲ್ಲಿ ಸರ್ಕಾರ ಘೋಷಿಸಿರುವುದು ನಿಜವೇ?

2. ಹಾಗಿದ್ದಲ್ಲಿ ಸದರಿ ಪ್ರದೇಶ ನಗರದ ಕೇಂದ್ರಸ್ಥಾನವಾಗಿದ್ದು ಇದರ ಸಮೀಪದಲ್ಲಿ ಕೆ.ಆರ್. ಆಸ್ಪತ್ರೆ ಸರ್ಕಾರಿ ವೈದ್ಯಕೀಯ ಕಾಲೇಜು ಬಸ್ ನಿಲ್ದಾಣ ರೈಲ್ವೆ ನಿಲ್ದಾಣ ಇರುವುದರಿಂದ ಸದರಿ ಆಸ್ಪತ್ರೆಯನ್ನು ಅಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೆ?

ಡಾ : ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

1) ಹೌದು

2) ಉದ್ದೇಶಿ ಹೈಟೆಕ್ ಆಸ್ಪತ್ರೆಯು ಬೋಧಕ ಆಸ್ಪತ್ರೆಯಾದ ಕೆ.ಆರ್. ಆಸ್ಪತ್ರೆಗೆ ಸಮೀಪವಿದ್ದು ಇದರಿಂದಾಗಿ ಇಲ್ಲಿ ಹೆಚ್ಚುವರಿ ವಿಭಾಗಗಳಾದ ನೆಫ್ರಾಲಜಿ, ಹೃದ್ರೋಗ ಚಿಕಿತ್ಸೆ ಇತ್ಯಾದಿ ವಿಭಾಗಗಳನ್ನು ಬೋಧಕ ಆಸ್ಪತ್ರೆಗೆ ಪೂರಕವಾಗುವಂತೆ ತೆರೆಯಲು ನಿರ್ಧರಿಸಿದ್ದು ಇದರಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಹಾಗೂ ಆಸ್ಪತ್ರೆಗೆ ಬರುವ ರೋಗಿಗಳಿಗೆ ಅನುಕೂಲವಾಗಿರುತ್ತದೆ. ಈ ಬಗ್ಗೆ ಮೈಸೂರು ವೈದ್ಯಕೀಯ ವಿದ್ಯಾಲಯದ ಪ್ರಾಂಶುಪಾಲರಾದ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು ವರದಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಇ. ಮಾರುತಿರಾವ್ ಪವಾರ್ :— ಮಾನ್ಯ ಅಧ್ಯಕ್ಷರೆ, ಮೈಸೂರಿನ ತಿಲಕ್ ನಗರದಲ್ಲಿ ಹೈಟೆಕ್ ಆಸ್ಪತ್ರೆಯನ್ನು ಮಾಡುತ್ತೇವೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ನನಗೆ ಅಲ್ಲಿಯೇ ಖಚಿತವಾಗಿ ಆಸ್ಪತ್ರೆಯನ್ನು ಮಾಡುತ್ತೇವೆ ಎನ್ನುವ ಬಗ್ಗೆ ಉತ್ತರಬೇಕು. ಏಕೆಂದರೆ ಅಲ್ಲಿ ರಾಜಕೀಯ ಪ್ರಭಾವದಿಂದ ಯಾವುದೋ ಒಂದು ಶಾಲೆಗೆ ಆ ಸ್ಥಳವನ್ನು ವಶಪಡಿಸಿಕೊಳ್ಳಬೇಕೆಂದು ಹೇಳಿ ಕೆಲವು ರಾಜಕೀಯ ಒತ್ತಡಗಳು ಬರುತ್ತಿರುವುದರಿಂದ ಅದೇ ಸ್ಥಳದಲ್ಲಿ ಆರೋಗ್ಯ ಇಲಾಖೆಗೆ ಸೇರಿದಂತಹ ಆಸ್ಪತ್ರೆಯನ್ನು ಅದೇ ಸ್ಥಳದಲ್ಲಿ ಮಾಡುತ್ತೇವೆ ಎನ್ನುವ ಬಗ್ಗೆ ಒಂದು ಖಚಿತವಾದ ಉತ್ತರವನ್ನು ಕೊಡಬೇಕು. ನಾನು ಕಳೆದ ವರ್ಷ ಇದೇ ಪ್ರಶ್ನೆಯನ್ನು ದಿ: 25-3-98 ರಂದು ಆರೋಗ್ಯ ಸಚಿವರಲ್ಲಿ ಕೇಳಿದ್ದೆ. ಸಚಿವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿದ್ದಾರೆ. ಮುಖ್ಯ ವಾಸ್ತುಶಿಲ್ಪಿ ತಯಾರಿಸಿದ ಸವಿವರವಾದ ಅಂದಾಜು ಪಟ್ಟಿ ಬಂದ ತಕ್ಷಣವೇ ಇದನ್ನು ಪ್ರಾರಂಭ ಮಾಡುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಸಾರಿ ಉತ್ತರ ಕೊಟ್ಟಂತಹ ಸಂದರ್ಭದಲ್ಲಿ ಕೆ.ಆರ್. ಆಸ್ಪತ್ರೆಯ ಪ್ರಾಂಶುಪಾಲರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಅಲ್ಲಿಂದ ವರದಿ ಬಂದ ತಕ್ಷಣ ಪ್ರಾರಂಭ ಮಾಡುವುದಕ್ಕೆ ನಾವು ವ್ಯವಸ್ಥೆಯನ್ನು ಮಾಡುತ್ತೇವೆಂದು ಉತ್ತರವನ್ನು

ಕೊಟ್ಟಿದ್ದಾರೆ. ಕಳೆದ ವರ್ಷ ನಾನು ಈ ಪ್ರಶ್ನೆಯನ್ನು ಕೇಳಿದ ಸಂದರ್ಭದಲ್ಲಿ ವಾಸ್ತುಶಿಲ್ಪಿಗಳ ಮೇಲೆ ಹೇಳಿದ್ದಾರೆ, ಈಗ ಪ್ರಾಂಶುಪಾಲರ ಮೇಲೆ ಹೇಳಿದ್ದಾರೆ. ಈಗ ಖಚಿತವಾಗಿ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಈಗಾಗಲೇ ಕಳೆದ ಅಧಿವೇಶನದಲ್ಲಿ ಹೈಟೆಕ್ ಆಸ್ಪತ್ರೆಯನ್ನು ಪ್ರಾರಂಭ ಮಾಡುತ್ತೇವೆಂದು ಸಚಿವರು ಉತ್ತರವನ್ನು ಕೊಟ್ಟಿದ್ದರು. ಇದನ್ನು ತಾವು ಯಾವಾಗ ಪ್ರಾರಂಭ ಮಾಡುತ್ತೀರಿ? ಹೀಗೆಯೇ ಎಷ್ಟು ವರ್ಷ ಮುಂದೂಡಿಕೊಂಡು ಹೋಗುತ್ತೀರಾ? ಮೈಸೂರು ನಗರಕ್ಕೆ ಈ ಒಂದು ಹೈಟೆಕ್ ಆಸ್ಪತ್ರೆಯ ಅವಶ್ಯಕತೆ ಬಹಳ ಇದೆ. ದಯಮಾಡಿ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರೆಂಬ ಬಗ್ಗೆ ಖಚಿತವಾದ ಉತ್ತರ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಡಾ: ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಈ ಜಾಗವನ್ನು ಯಾವುದೇ ಒಂದು ಶಾಲೆಗೆ ಮಾಡುವುದಕ್ಕಾಗಲಿ ಅದು ಸಾಧ್ಯವಿಲ್ಲ. ಈ ಜಾಗವನ್ನು ಹೈಟೆಕ್ ಆಸ್ಪತ್ರೆ ಮಾಡಬೇಕೆಂಬ ಉದ್ದೇಶಕ್ಕಾಗಿಯೇ ಇಟ್ಟುಕೊಂಡಿದ್ದೇವೆ. ಈ ಜಾಗ ಹೈಟೆಕ್ ಆಸ್ಪತ್ರೆಗಾಗಿ ಅಥವಾ ಬೇರೆ ಆಸ್ಪತ್ರೆಯ ಅನುಕೂಲಕ್ಕಾಗಿ ಉಪಯೋಗವಾಗುತ್ತದೆಯೇ ಹೊರತು ಇದನ್ನು ಬೇರೆ ಯಾವುದೇ ಸ್ಕೀಮ್‌ಗೆ ಕೊಡತಕ್ಕಂಥದ್ದು ಅಲ್ಲ. ಇದು ತಮಗೂ ಗೊತ್ತಿದೆ. ಮೈಸೂರಿನ ಚೆಲುವಾಂಬ ಆಸ್ಪತ್ರೆ ಮತ್ತು ಕೆ.ಆರ್. ಆಸ್ಪತ್ರೆಯ ಕೆಲಸಗಳು ಸಾಕಷ್ಟು ಆಧುನೀಕರಣವಾಗಬೇಕಾಗಿದೆ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಬಂದು ಆಸ್ಪತ್ರೆಯಲ್ಲಿ ಸಾಕಷ್ಟು ಆಧುನೀಕರಣ ಆಗಿಲ್ಲ ಮತ್ತು ಅಲ್ಲಿರುವ ಸೌಲಭ್ಯಗಳು ಸರಿಯಿಲ್ಲ ಹಾಗೂ ಟೀಚಿಂಗ್ ಮಾಡುವುದಕ್ಕೆ ಅಧ್ಯಾಪಕರ ಕೊರತೆ ಇದೆ ಎಂದು ಹೇಳಿದ್ದಾರೆ. ಇವತ್ತು ನಾವು ಈ ಎರಡು ಆಸ್ಪತ್ರೆಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದೇವೆ. ಈ ಕೆಲಸವಾದ ನಂತರ, ಹೈಟೆಕ್ ಆಸ್ಪತ್ರೆಯನ್ನು ತೆಗೆದುಕೊಳ್ಳುವುದಕ್ಕೆ, ಅದನ್ನು ಶುರು ಮಾಡಬೇಕೆಂಬ ಅವಶ್ಯಕತೆ ಇದೆಯೋ, ಇಲ್ಲವೋ ಎನ್ನುವುದಕ್ಕೆ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಅಲ್ಲಿಂದ ವರದಿ ಬಂದ ತಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

<u>ಪಾಂಡವಪುರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ.</u>

19(89) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಾಂಡವಪುರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಇದನ್ನು ಪರಿಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?